ದುಡಿದು ತಿನ್ನುವ ಅವನ ಬಗ್ಗೆ ಜ್ಯೋತಿಗೆ ಕನಿಕರ. ಹೀಗಾಗಿ ಅವಳೇನಾದರೂ ಮನೆಯಿಂದ ತಂದ ತಿಂಡಿ ಡಬ್ಬಿಗಳಲ್ಲಿ ಕ್ಯಾಬ್ ಇಳಿಯುವಾಗ ಒಂದು ಡಬ್ಬಿ ಅವನದ್ದಾಗುತ್ತಿತ್ತು. ದೊಡ್ಡ ಜಮೀನ್ದಾರರ ಮನೆಯ ಹುಡುಗಿ ತಿನ್ನುಣ್ಣಲು ಬೇಕಾದ್ದನ್ನು ಕೊಳ್ಳಲು ಅವಳೆಂದೂ ಹಿಂಜರಿಯದ್ದನ್ನು ಅವನಂತೆ ಗೆಳತಿಯರೂ ಗಮನಿಸಿದ್ದರು. ಅವಳು ಏನೇ ಸಿಹಿ ಕೊಂಡರೂ ಜ್ಯೂಸ್ ತೆಗೆದುಕೊಂಡರೂ ಗೆಳತಿಯರಿಗೂ ಪಾಲಿರುತ್ತಿತ್ತು. ಕ್ಯಾಬ್ ನಿಲ್ಲಿಸಿಕೊಂಡು ದೂರದಲ್ಲಿ ನಿಂತಿರುವ ಯಶ್‌ಗೂ ಟ್ರಾನ್ಸ್‌ಫರ್ ಆಗುತ್ತಿತ್ತು. ಮೊದಮೊದಲು ಮುಜುಗರ ಪಡುತ್ತಿದ್ದವನು ಹುಡುಗಿಯರ ಗ್ಯಾಂಗ್‌ಗೆ ಒಗ್ಗಿಕೊಂಡ. ವರ್ಷ ಉರುಳಿದಂತೆ ತನ್ನ ಧಿರಿಸು ಲವಲವಿಕೆ ಸಾಂಗುಗಳಿಂದ ಗೆಳೆಯನಂತಾದ.

ದಿನಗಳೆದಂತೆ ಅವನ ಪಕ್ಕದ ಸೀಟು ಜ್ಯೋತಿಗಾಗಿ ರಿಸರ್ವ್ ಆಯಿತು. ಗೌಡರ ಮಗಳೆಂಬ ಭಯ ಗೌರವವೆಂದುಕೊಂಡರು ಕ್ಯಾಬ್ ಹತ್ತಿ ಇಳಿವವರು. ಹುಡುಗಿಯರಿಗೆ ಸೈನ್ಸು ಮ್ಯಾಥ್ಸೂ ಪರಪೋಟಾಗಿ ಅವರವರೆ ಜಗಳಕ್ಕೆ ಬಿದ್ದಾಗ ಯಶವಂತ ಮಧ್ಯೆ ಪ್ರವೇಶಿಸಿ, ಅವರ ತೊಡಕನ್ನು ಬಿಡಿಸಿ ತಾನು ಓದಿನಲ್ಲೂ ಮುಂದಿದ್ದೆನೆಂದು ಸಾಬೀತುಪಡಿಸುತ್ತಿದ್ದ. ಅವನು ಡಿಸ್ಟಿಂಕ್ಷನ್‌ನಲ್ಲಿ ಡಿಗ್ರಿ ಪಾಸಾಗಿದ್ದಾನೆಂದು ಅವನ ಅಜ್ಜಿ ಕೊಂಡಾಡಿದಾಗ ಕಾಲೇಜಿಗೆ ಫ್ಯಾಶನ್ ಷೋಗೆ ಬರುವವರಂತೆ ಬಂದು ಹೋಗುತ್ತಿದ್ದ ಹುಡುಗಿಯರು ಬೆಚ್ಚಿ ಬಿದ್ದಿದ್ದರು. ಒಮ್ಮೆ ಕಾಲೇಜ್ ಪಟಾಲಂ ಒಬ್ಬ ಕ್ಯಾಬ್ ಹತ್ತಿ ಹುಡುಗಿಯರಿಗೆ ಕೀಟಲೆ ಮಾಡುವಾಗ ಅವನನ್ನು ತಡವಿಕೊಂಡು ಗುಟುರು ಹಾಕಿದ್ದ. ‘ಆಫ್ಟರ್ ಆಲ್ ಡ್ರೈವರ್, ಮುಚ್ಕೊಂಡು ಗಾಡಿ ಓಡ್ಸಲೆ ಗುಬಾಲ್’ ಅಂದಾಗ ಪಟಾಲಂನ ಕಾಲರ್ ಹಿಡಿದು ಕ್ಯಾಬ್‌ನಿಂದ ಹೊರಗೆಳೆದು ಹಾಕಿದ್ದ. ‘ನೊಡ್ಕೋತೀನಿ ಕಣ್ಲೇ’ ಎಂದು ಆವಾಜ್ ಹಾಕಿ ಹೋದವನು, ಅವನ ಗ್ಯಾಂಗ್ ಸಮೇತ ಕ್ಯಾಬ್ ಹತ್ತಿದಾಗ ಯಶವಂತನೇನೂ ಮೇಟ್ ಮಾಡಲಿಲ್ಲ. ಹುಡುಗಿಯರು ಬೆದರಿದ ಹರಿಣಗಳಂತಾಗಿದ್ದರು. ಮಧ್ಯೆ ಮಧ್ಯೆ ಕಾಲೇಜ್ ಪಟಾಲಮ್ಮಗಳು ಸಾಂಗ್ ಹೇಳೋದು, ಸಿಳ್ಳೆ ಹೊಡೆಯೋದು ಬೇಕೆಂದೇ ಶುರು ಮಾಡಿದಾಗ ಕ್ಯಾಬ್ ನಿಲ್ಲಿಸಿ ಇಳಿದುಕೊಳ್ಳಲು ಸೂಚಿಸಿದ್ದ. ತಿರುಗಿಬಿದ್ದಾಗ ಜಾಡಿಸಿ ಅವರನ್ನಲ್ಲೇ ಉದುರಿಸಿ ಹುಡುಗಿಯರನ್ನು ಸೇಫಾಗಿ ಮನೆ ಸೇರಿಸಿದ್ದ. ಈಗವನು ಹುಡುಗಿಯರ ಪಾಲಿಗೆ ಮಾಸ್ ಹೀರೋನಂತೆ ಭಾಸವಾಗಿಬಿಟ್ಟಿದ್ದ.

ಮರುದಿನ ಅದೇ ಹುಡುಗರ ಮಾತು ಕೇಳಿ ಪೊಲೀಸರು ಬಂದು ಯಶವಂತನಿಗೆ ಸ್ಟೇಷನ್ ದರ್ಶನ ಮಾಡಿಸಿದ್ದರು. ವಿಷಯ ತಿಳಿದ ಹುಡುಗಿಯರು ಸಂಜೆ ಹಳ್ಳಿಗೆ ಹೋಗೋದು ಹೇಗೆ ಎಂದಾಲೋಚಿಸುವಾಗ ನಮಗಾಗಿ ಅವರನ್ನು ಎದುರುಹಾಕಿಕೊಂಡ ಯಶವಂತನನ್ನು ಹೇಗಾದರೂ ಮಾಡಿ ಬಚಾವ್ ಮಾಡಬೇಕೆಂದು ಆಲೋಚಿಸಿದ್ದು, ಜ್ಯೋತಿ ಮಾತ್ರ. ಹುಡುಗಿಯರಿಗೆ ಹುರಿದುಂಬಿಸಿ ಅವರೊಂದಿಗೆ ಸ್ಟೇಷನ್‌ಗೆ ಬಂದ ಜ್ಯೋತಿ, ಇನ್ಸ್‌ಪೆಕ್ಟರ್‌ಗೆ ತಮ್ಮ ಕಾಲೇಜಿನ ಪಟಾಲಮ್ಮುಗಳ ಬಗ್ಗೆ ದೂರು ಕೊಟ್ಟಿದ್ದಳು. ಇನ್ಸ್‌ಪೆಕ್ಟರ್ ಪಟಾಲಮ್ಮುಗಳನ್ನು ಸ್ಟೇಷನ್‌ಗೆ ಕರೆಸಿ ಎನ್‌ಕ್ವೈರಿ ಮಾಡುತ್ತಾ ಲಟ್ಟಾ ಆಡಿಸಿದಾಗ ಪಟಾಲಮ್ಮುಗಳು ಸಾರಿ ಕೇಳಿದ್ದರು. ಜ್ಯೋತಿ ಕನಿಕರಿಸಿ ದೂರು ವಾಪಾಸ್ ಪಡೆದಿದ್ದರಿಂದ ಪಟಾಲಮ್ಮುಗಳೂ ಬಚಾವಾಗಿದ್ದರು. ಯಶವಂತನನ್ನು ರಿಲೀಸ್ ಮಾಡುವಾಗ ಸಾಕ್ಷಾತ್ ಇನ್ಸ್‌ಪೆಕ್ಟರ್ ಅವಳ ಧೈರ್ಯವನ್ನು ಎಲ್ಲರೆದುರು ಪ್ರಶಂಸಿಸಿದ್ದರು. ಯಶವಂತನೂ ವಿನಮ್ರವಾಗಿ ಥ್ಯಾಂಕ್ಸ್ ಹೇಳುವಾಗ ಇವಳು ‘ಸಾರಿ’ ಕೇಳಿ ಹೃದಯ ವೈಶಾಲ್ಯ ಮೆರೆದಳು. ಅವಳೀಗ ಯಶ್‌ನ ಕಣ್ಣಲ್ಲಿ ಸಿನಿಮಾ ಹಿರೋಯಿನ್‌ಳಂತೆಯೇ ಪ್ರಭಾವ ಬೀರಿದಳು. ಹೀಗಾಗಿ ದಿನವೂ ಕ್ಯಾಬ್‌ನಲ್ಲಿ ಅವಳನ್ನು ಕ್ಯಾಚ್ ಮಾಡುವ ಯಶ್, ಅವಳ ಮನಸ್ಸನ್ನೂ ಕ್ಯಾಚ್ ಹಿಡಿದ. ಮಾತುಕತೆ, ನಗು, ಅಂತ್ಯಾಕ್ಷರಿಗಳು ಕ್ಯಾಬನ್ನು ಅಲಂಕರಿಸಿದವು. ಈ ನಡುವೆ ಮಗಳು ಸ್ಟೇಷನ್‌ಗೆ ಹೋಗಿ ಬಂದ ವಿಷಯವನ್ನರಿತ ಗೌಡರು ರಾಂಗಾರಾದರು. ಆದರೆ ಗೌಡತಿ ‘ಅವಳು ಮಾಡಿದ್ದರಲ್ಲಿ ತಪ್ಪೇನಿದೆ? ನಿಮ್ಮ ಮಗಳಲ್ವೆ?’ ಎಂದು ದಬಾಯಿಸಿದಾಗ ತಣ್ಣಗಾದರು.

ಗೌಡರೂ ಸುತ್ತು ಹಳ್ಳಿಯಲ್ಲಿ ಪರೋಪಕಾರಿಗಳೆಂದೇ ಖ್ಯಾತನಾಮರಲ್ಲದೆ, ಆಗಾಗ ಅವರು ನಡೆಸುವ ‘ಕಟ್ಟೆ ಪಂಚಾಯ್ತಿ’ಯ ನೇರ ನಿಷ್ಠೂರ ತೀರ್ಪಿನಿಂದಾಗಿ ಅವರ ಗೌರವದ ಮೆರಿಟ್ ದ್ವಿಗುಣಿಸಿತ್ತು. ಹೀಗಾಗಿ ಮಗಳ ದಿಟ್ಟತನ ಅವರಿಗೂ ಹಿಡಿಸಿತ್ತು. ಆದರೂ ಯಶವಂತನನ್ನು ಕರೆಸಿ ಧಮ್ಕಿ ಹಾಕಿದ್ದರು. ‘ನಿನ್ನ ಕೆಲಸ ನೀನು ಮಾಡ್ಕೊಂಡು ಹೋಗಲೇ ಬ್ಯಾಂಚೋದ್. ಹಂಗೇನಾರ ಯಾವನಾರ ಪೋಕರಿ ನನ್ಮಕ್ಳು ನಮ್ಮ ಹಳ್ಳಿ ಹೆಣ್ಣುಹೈಕಳ ತಂಟೆಗೆ ಬಂದ್ರೆ ನನಗೇಳೋ ನಾಯಿ. ಹುಡುಗೀರ ಎದುರು ಹೀರೋ ಪಾಲ್ಟು ಮಾಡೋಕೋಗಿ ಸೊಂಟ ಮುರ್ಕೊಂಡಿಯಾ’ ಎಂದು ಬಿಸಿ ಮುಟ್ಟಿಸಿದ್ದರು. ಆಮೇಲೆ ಬೇಸಿಗೆ ರಜ ಬಂದು ಒಕ್ಕರಿಸಿತು. ಯಶವಂತನಿಗಂತೂ ಹಳ್ಳಿ ಪ್ಯಾಸೆಂಜರ್ ಇದ್ದರು. ಆದರೆ ಅವನ ಮಾತು ಸಾಂಗು ಜೋಕು ಕೇಳದೆ ಹುಡುಗಿಯರಿಗಂತೂ ಬ್ಯಾಸರ. ಅದರಲ್ಲೂ ಜ್ಯೋತಿಗಂತೂ ಅಗದಿ ಬ್ಯಾಸರ. ತಂದೆ, ಅಣ್ಣಂದಿರ ಬಳಿ ಕಾಲೇಜಿನ ನೋಟೀಸ್ ಬೋರ್ಡ್ ಆಗಾಗ ನೋಡಬೇಕೆಂದಳು. ರಿಸಲ್ಟ್ ಹಾಕಿರ್ತಾರೆ ಅಂದಳು. ಮಾರ್ಕ್ಸ್‌ಕಾರ್ಡ್ ತರುವೆ ಅಂದಳು. ಏನೇನೋ ನೆಪ ಹೇಳಿ ಕ್ಯಾಬ್ ಹತ್ತಿ ಇಳಿದಳು. ತನಗೆ ಸಾಥ್ ಕೊಟ್ಟ ಗೆಳತಿಯರ ಚಾರ್ಜೂ ತಾನೇ ಹಾಕಿಕೊಂಡಳು. ಇಬ್ಬರೂ ಕಣ್ಣಲ್ಲೇ ಮಾತಾಡಿದರು. ಪ್ರೀತಿಸಿದರೂ ಸಹಿತ ಅದು ಕ್ಯಾಬ್‌ನ ಪ್ಯಾಸೆಂಜರ್ಸ್‌ಗೆ ರೀಚ್ ಆಗದಿರಲಿಲ್ಲ. ಇವರಿಬ್ಬರೂ ‘ಲವ್’ ಮಾಡುತ್ತಿದ್ದಾರೆಂದು ಅಲ್ಲಲ್ಲಿ ಸುದ್ದಿಯೂ ಆಯಿತು. ಅಷ್ಟರಲ್ಲಿ ಕಾಲೇಜೂ ಓಪನ್ ಆಯಿತು. ಯಶ್‌ನ ಕ್ಯಾಬ್ ಹುಡುಗಿಯರಿಗಾಗಿ ಕಾದೂ ನಿಂತಿತು. ಯಶ್‌ನ ಪಕ್ಕದ ಸೀಟೂ ಜ್ಯೋತಿಗಾಗಿ ಪರ್ಮನೆಂಟ್ ರಿಸರ್ವ್ ಆಯಿತು. ಇದರಿಂದಾಗಿ ಹಲವರು ಯಶ್‌ನನ್ನು ದಬಾಯಿಸಿದರಾದರೂ ಅಂಥವರನ್ನು ಅವನು ಕ್ಯಾಬ್‌ನಿಂದ ನಿಷೇಧಿಸಲಾಗಿ ಸಣ್ಣಗೆ ಶತ್ರು ಸಮೂಹ ಹೆಚ್ಚಿಕೊಂಡಿತು.

ದಿನಗಳೆದಂತೆ ನಿಧಾನವಾಗಿ ಮೂಗಿಗೆ ಬಡಿವ ಹೂಸಿನಂತೆ ಗೌಡರ ಮೂಗಿಗೂ ಬಡಿದಾಗ ಅವಕ್ಕಾದರು. ಪ್ರೀತಿಯಿಂದ ಸಾಕಿದ ಒಬ್ಬಳೇ ಮಗಳು ಹೀಗಾದಳೆ ಎಂಬ ದುಃಖ ಹೇಳಿಕೊಳ್ಳಲಾಗದೆ, ಮಗಳನ್ನೂ ತರಾಟೆಗೆ ತೆಗೆದುಕೊಳ್ಳಲಾಗದೆ, ತಿಳಿದ ಮೇಲೂ ತಾಳಿಕೊಳ್ಳಲಾಗದೆ ಹೈರಾಣಾದ ಗೌಡರು ಯಶವಂತನನ್ನು ಹದ್‌ಬಸ್ತ್‌ನಲ್ಲಿಡಲು ಯೋಚಿಸಿ ತಮ್ಮಿಬ್ಬರು ಗಂಡುಮಕ್ಕಳೊಂದಿಗೆ ನೋವನ್ನು ಹಂಚಿಕೊಂಡರು. ‘ಅವನ್ಯಾವ ಮಹಾ ಗೊಂಜಾಯಿ. ಕೈಕಾಲು ಮುರ್ಸಿ ಮೂಲೆಗೆ ಕುಂಡ್ರಿಸಿದ್ರಾತು’ ಅಂದರು ಗಂಡುಮಕ್ಕಳು.

ಒಂದು ದಿನ ಯಶನ ಕ್ಯಾಬ್ ಅನ್ನು ಹತ್ತಿದ ಗೌಡರ ಮಕ್ಕಳು ತಂಗಿ ಮತ್ತು ಇತರೆ ಹುಡುಗಿಯರೆದುರೇ ಯಶನನ್ನು ತಡವಿಕೊಂಡು ‘ಮುಕಳಾಗೆ ತಿಮಿರೇನಲೆ ನನ್ ಮಗ್ನೆ’ ಎಂದು ವಿನಾಕಾರಣ ಕೂಗಾಡುತ್ತಾ ಮಾತನಾಡಲೂ ಬಿಡದೆ ಮುಖಮೂತಿ ಜಜ್ಜಿ ಕ್ಯಾಬಿನಿಂದೆತ್ತಿ ಬಿಸಾಡಿದರು. ಬಿಡಿಸಲು ಮಧ್ಯೆ ನುಗ್ಗಿದ ಜ್ಯೋತಿಯನ್ನೂ ತದಕಿ ಹೊರಗೆಸೆದು ದಾಂಧಲೆ ಮಾಡಿ ಎಲ್ಲರ ಮನದಲ್ಲಿ ಭೀತಿಯನ್ನು ಬಿತ್ತಿದ್ದರಲ್ಲದೆ ವೃಥಾ ಹಳ್ಳಿಯಲ್ಲೆಲ್ಲಾ ಲವ್‌ನಾತ ಹೊಡೆಯಲು ನಾಂದಿ ಹಾಡಿದರು. ಹಳ್ಳಿಗರ ಕಣ್ಣಲ್ಲಿ ಹೀರೋ ಕಮ್ ವಿಲನ್‌ಗಳೂ ಆದರು. ತಾರಾಮಾರಾ ಏಟು ತಿಂದಿದ್ದ ಯಶ್ ಡ್ಯೂಟಿಗೆ ರಜಾ ಹಾಕಿ ಹಾಸಿಗೆ ಹಿಡಿದು ಅಜ್ಜಿಯ ‘ಉಪ್ಪು ಕಾವಿನ’ ಶುಶ್ರೂಷೆಗೆ ಒಡ್ಡಿಕೊಂಡಿದ್ದ.

ಎರಡು ದಿನ ಹೇಗೋ ಜೀವ ಬಿಗಿ ಹಿಡಿದುಕೊಂಡಿದ್ದ ಜ್ಯೋತಿ ಮಧ್ಯಾಹ್ನವೇ ಸೈಕಲ್ಲೇರಿ ಪಕ್ಕದ ವಿಲೇಜ್‌ನಲ್ಲಿರೋ ಯಶವಂತನ ಯೋಗಕ್ಷೇಮ ವಿಚಾರಿಸಲು ಹಾಜರಾಗಿದ್ದಳು. ಅಜ್ಜಿ ಅವಳಿಗೂ ಅವರಪ್ಪನಿಗೂ ಹಿಡಿಶಾಪ ಹಾಕಿ ಅತ್ತೂ ಕರೆದು ಲಟಿಕೆ ಮುರಿದಾಗ ಯಶ್‌ನೇ ಅವಳನ್ನು ಅಜ್ಜಿಯಿಂದ ಪಾರು ಮಾಡಿದ್ದ. ಅವಳೇ ನನ್ನ ಜೀವ ಅಂದಿದ್ದ. ‘ಹುಚ್ಚು ಮುಂಡೇ ಗಂಡ, ಗೌಡ ನೋಡೋಕೆ ಬಸಪ್ಪ, ಒಳಗೇ ವಿಷಪ್ಪ. ಬಸವಣ್ಣನ ವಚನ ಹೇಳ್ಕೋಂತ್ಲೆ ಬಾರಾ ಖೂನ್ ಮಾಡ್ಸಿ ದಕ್ಕಿಸಿಕೊಂಡ ಪಿಂಡವದು. ನೀನ್ಯಾವ ಪಡಪೋಸಿ, ಈ ಬೆಂಡ್ಲಿ ಆಸೆ ಬಿಡು. ಇಬ್ಬರು ಬದುಕ್ಕೋತ್ತೀರಿ ಮಕ್ಳಾ’ ಅಂತೆಲ್ಲಾ ಅಜ್ಜಿ ಬುದ್ಧಿ ಹೇಳ್ತು. ಒಬ್ಬರನ್ನೊಬ್ಬರು ವಾರಗಟ್ಟಲೆ ನೋಡದಂತಾದಾಗ ಇಬ್ಬರಿಗೂ ಬದುಕು ಶೂನ್ಯವೆನ್ನಿಸಿ ಒಳಗೆ ಕೊತಕೊತನೆ ಕುದ್ದು ಇಮರಿಹೋದರು. ಗೌಡರ ಮನೆಯಲ್ಲಿ ಗಂಡಿನವರು ಹೆಣ್ಣು ನೋಡಲು ಬರುತ್ತಾರೆಂಬ ಘಮಲು ಯಶ್ ತಾನಾಗಿಯೇ ಮುಂದುವರೆಯುವ ಗಂಡಲ್ಲವೆಂದರಿದಾಗ ಜ್ಯೋತಿ, ಯಾವನ ಕೈಲೋ ತಾಳಿ ಕಟ್ಟಿಸಿಕೊಳ್ಳಲು ಸಿದ್ಧಳಾಗದೆ ಬಂದು ರಾತ್ರಿ ಬೈಸಿಕಲ್ಲೇರಿ ಯಶವಂತನ ಹಳ್ಳಿಗೆ ಬಂದಿಳಿದಳು.

ಬೆಳಿಗ್ಗೆ ನೇಸರ ಮೂಡುತ್ತಲೇ ಗೌಡರು ಪಂಚೆ ಅಡರಗಟ್ಟಿ ಸುತ್ತು ಹತ್ತು ಹಳ್ಳಿ ಬೆದಕಾಡಿದರು. ಗಂಡು ಮಕ್ಕಳಂತೂ ರಾಂಗ್ ಆಗಿ ಸಿಕ್ಕವರ